## ರಿಷಿ ಖುಲ್ಲಂ ಖುಲ್ಲಾ!

ಹಿರಿಯ ನಟ ರಿಷಿ ಕಪೂರ್, ನೇರ ನಿಷ್ಠುರ ಮಾತಿಗೆ ಹೆಸರು. ಅನಿಸಿದ್ದನ್ನು, ತಮ್ಮ ಅನುಭವಗಳನ್ನು ಮುಚ್ಚುಮರೆಯಿಲ್ಲದೆ, ನೇರವಾಗಿ ಹೇಳುವವರು. ಇಂತಿಪ್ಪ ರಿಷಿ, ತಮ್ಮ ಬದುಕನ್ನು 'ಸೆನ್ಸಾರ್' ಇಲ್ಲದೆ ಖುಲ್ಲಂ ಖುಲ್ಲಾಗೊಳಿಸಿದ್ದಾರೆ. ಇಲ್ಲಿ ತಮ್ಮದು ಮಾತ್ರವಲ್ಲ, ತಮ್ಮ ಕುಟುಂಬದ ಕಥನವನ್ನೂ ತೆರೆದಿಟ್ಟಿದ್ದಾರೆ ರಿಷಿ. 'ಖುಲ್ಲಂ ಖುಲ್ಲಾ: ರಿಷಿ ಕಪೂರ್ ಅನ್‌ಸೆನ್ಸಾರ್ಡ್'– ಇದು ರಿಷಿ ಅವರ ಆತ್ಮಚರಿತ್ರೆ. ಇಲ್ಲಿ ಯಾವ ಮುಚ್ಚಟೆಗಳಿಲ್ಲದೆಯೇ ಎಲ್ಲವನ್ನೂ ಮುಕ್ತವಾಗಿ ಬರೆದಿರುವುದಾಗಿ ರಿಷಿ ಹೇಳಿಕೊಂಡಿದ್ದಾರೆ. ಅಪ್ಪ ರಾಜ್ ಕಪೂರ್ ಪ್ರೀತಿ ಪ್ರೇಮದ ಪ್ರಸಂಗಗಳನ್ನು ಅಲ್ಲಲ್ಲಿ ತಂದಿದ್ದಾರೆ. 'ಪ್ರಚಾರದ ಹಸಿವಿಗಾಗಿ ರಾಜ್ ಕಪೂರ್ ಅವರು ನಟಿಯರೊಂದಿಗೆ ರೊಮ್ಯಾಂಟಿಕ್ ಸಂಬಂಧ ಹೊಂದುತ್ತಿದ್ದರು, ಎಂಬ ವೈಜಯಂತಿ ಮಾಲಾ ಆರೋಪಕ್ಕೆ ಪ್ರತಿಕ್ರಿಯೆ ನೀಡಿರುವ ರಿಷಿ, ಅಲ್ಲಲ್ಲಿ ಅಪ್ಪನನ್ನು ಸಮರ್ಥಿಸಿಕೊಳ್ಳುತ್ತಲೂ ಹೋಗಿದ್ದಾರೆ. ತನ್ನ ಮತ್ತು ನೀತುವಿನ ವೈವಾಹಿಕ ಬದುಕು, ಸಹನಟಿಯರೊಂದಿಗಿನ ಪ್ರೀತಿಯ ಕುರಿತ ಗಾಳಿ ಮಾತುಗಳ ಕುರಿತು ನೆನಪುಗಳನ್ನು ಕೆದಕಿದ್ದಾರೆ.



ಈಗಿನ ಮಕ್ಕಳು ಒಂದು ರೀತಿ ಇನ್‌ಸ್ಟಂಟ್ ನೂಡಲ್ಸ್ ಇದ್ದಂತೆ ಎನ್ನುವುದು ರಿಷಿ ಅಭಿಪ್ರಾಯ. ಆರೇಳು ವರ್ಷದ ಮಕ್ಕಳಲ್ಲಿ ಭಾವಾಭಿನಯ ಹೊಮ್ಮಿಸುವ ಕಲೆ ಮೈಗೂಡಿರುತ್ತದೆ. ನನ್ನ ಅಜ್ಜನ (ಪೃಥ್ವಿರಾಜ್ ಕಪೂರ್) ಕಾಲದಲ್ಲಿ ಎಲ್ಲವನ್ನೂ ಅನುಭವದಿಂದ ಪಡೆದುಕೊಳ್ಳುತ್ತಿದ್ದೆವು. ಈ ಮಕ್ಕಳು ನೂಡಲ್ಸ್ ಥರ. ಚೆನ್ನಾಗಿ ತಯಾರಾಗಿರುತ್ತಾರೆ. ತಮ್ಮ ಬದುಕಿನ ಬಗ್ಗೆ ತಿಳಿದುಕೊಂಡಿರುತ್ತಾರೆ. ಹೆಚ್ಚು ವೃತ್ತಿಪರರು ಮತ್ತು ಸಮಯ ಪರಿಪಾಲಕರು. ನಾವು ಯಾವಾಗಲೂ ತಡವಾಗಿ ಹೋಗುತ್ತಿದ್ದವರು. ಮುಂದಿನ ದಾರಿಯ ಅರಿವೂ ಇರಲಿಲ್ಲ. ಹೆಚ್ಚು ಶಿಸ್ತು ಇರುತ್ತಿತ್ತಷ್ಟೇ. ಆದರೆ, ನಮ್ಮ ಕಾಲದ ಸಿನಿಮಾ ಮತ್ತು ಹಾಡುಗಳ ಗುಣಮಟ್ಟ ಚೆನ್ನಾಗಿತ್ತು. ಈಗ ಸಿನಿಮಾಗಳಲ್ಲಿ ಕಂಟೆಂಟ್ ಇರುವುದೇ ಇಲ್ಲ. ಸಂಗೀತವೂ ಮೌಲ್ಯ ಕಳೆದುಕೊಂಡಿವೆ. ಈಗೇನಿದ್ದರೂ ಮಲ್ಟಿಪ್ಲೆಕ್ಸ್ ಪ್ರೇಕ್ಷಕರು. ಆದರೂ ಕಳೆದ 10 ವರ್ಷಗಳ ಹಿಂದಿನದ್ದಕ್ಕಿಂತ ಉತ್ತಮ ಸಿನಿಮಾಗಳನ್ನು ಮಾಡುತ್ತಿದ್ದೇವೆ ಎಂದಿದ್ದಾರೆ ರಿಷಿ.



## ಅಮೀರ್ ಬಿಟ್ಟು ಇನ್ಯಾರು?

ಅಮೀರ್ ಖಾನ್ ನಟನೆಯ 'ದಂಗಲ್' ಬಾಲಿವುಡ್‌ನಲ್ಲಿ ದಾಖಲೆಯ ಗಳಿಕೆ ಕಂಡಿದೆ. ಬಾಲಿವುಡ್‌ನ ಇತಿಹಾಸದಲ್ಲಿಯೇ ಅತಿ ದೊಡ್ಡ ಹಿಟ್ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಕುಸ್ತಿಪಟು ಮಹಾವೀರ್ ಸಿಂಗ್ ಫೋಗಟ್ ಪಾತ್ರಕ್ಕಾಗಿ ಅಮೀರ್, ದೇಹವನ್ನು ಹುರಿಗಟ್ಟಿಸಿಕೊಂಡು, ಹಾಗೆಯೇ ಅದಕ್ಕೆ ತದ್ವಿರುದ್ಧವಾಗಿ ಉಬ್ಬಿಸಿಕೊಂಡು ಅಚ್ಚರಿ ಮೂಡಿಸಿದ್ದ. ಈ ಪಾತ್ರಕ್ಕೆ ಅಮೀರ್ ಅಲ್ಲದೆ, ಇನ್ಯಾರೂ ಸಾಟಿಯಾಗುತ್ತಿರಲಿಲ್ಲ ಎನ್ನುವಂತೆ ಅಮೀರ್ ಪರಕಾಯ

## ರೋಮಾಂಚಕ ಗಾಳಿಮಾತು!

ಹೆಚ್ಚಿನ ರೂಮರ್‌ಗಳು ಮನಸಿಗೆ ಕಿರಿಕಿರಿ ಉಂಟು ಮಾಡುತ್ತವೆ. ರೂಮರ್‌ಗಳೆಂದರೆ ಹಾಗೆಯೇ ಅಲ್ಲವೇ, ತಮಗೆ ಬಹಿರಂಗವಾಗಲು ಇಷ್ಟವಾಗದ ಸಂಗತಿ ಅಥವಾ ಸತ್ಯಕ್ಕೆ ದೂರವಾದ ವಿಷಯಗಳ ಕುರಿತು ಹೇಗೋ ಹುಟ್ಟಿಕೊಳ್ಳುವ ಸುದ್ದಿ. ಕೆಲವು ರೂಮರ್‌ಗಳು ಮಾತ್ರ ವಿಚಿತ್ರ ಖುಷಿ ಕೊಡುತ್ತವೆ. ಮೊನ್ನೆ ಮೊನ್ನೆ ಆದಿತ್ಯ ಚೋಪ್ರಾನ 'ಬೇಫಿಕ್ರೆ' ಚಿತ್ರದಲ್ಲಿ ಬಿಂದಾಸ್ ಆಗಿ ಕಾಣಿಸಿಕೊಂಡಿದ್ದ ವಾಣಿ ಕಪೂರ್ ಈ ರೀತಿ ಗಾಳಿ ಸುದ್ದಿಯನ್ನು ಕೇಳಿ, ಅದು ಸತ್ಯವಾಗಲಿ ಎಂಬ ಸಂಭ್ರಮದ ನಿರೀಕ್ಷೆಯಲ್ಲಿದ್ದಾಳೆ. ಆಕೆಯ ಮುಂದಿನ ಸಿನಿಮಾ ಶಾರುಖ್ ಖಾನ್ ಜತೆ. ಅದಕ್ಕ ಸಹಿ ಹಾಕಿಯಾಗಿದೆ ಎಂಬ ಸುದ್ದಿ ಬಿಟೌನ್‌ನಲ್ಲಿ ಹರಡಿದೆ. ಅದನ್ನು ಕೇಳಿಯೇ ಆನಂದತುಂದಿಲಳಾಗಿರುವುದಾಗಿ ವಾಣಿ ಹೇಳಿಕೊಂಡಿದ್ದಾಳೆ. ಇದೊಂಥರ ಅದ್ಭುತ ರೂಮರ್ ಎನ್ನುವುದು ವಾಣಿಯ ಬಣ್ಣನೆ. ಅದು ಸತ್ಯವಾಗಲಿ ಎಂಬ ಆಶಯ ನನ್ನದು. ವಾಸ್ತವವಾಗಿ ನಾನು ಆ ಚಿತ್ರದಲ್ಲಿ ನಟಿಸುತ್ತಿಲ್ಲ. ಅಂತಹ ಅವಕಾಶ ಬಂದಿಲ್ಲ. ಬಂದರೆ ಅದಕ್ಕಿಂತ ಖುಷಿ ಬೇರೊಂದಿಲ್ಲ ಎಂದಿದ್ದಾಳೆ ಆಕೆ. 'ಬೇಫಿಕ್ರೆ' ಬಳಿಕ ಆಕೆ ಯಾವ ಸಿನಿಮಾವನ್ನೂ ಒಪ್ಪಿಕೊಂಡಿಲ್ಲವಂತೆ. ಬರುತ್ತಿರುವ ಕಥೆಗಳನ್ನು ಓದುತ್ತಿದ್ದೇನಷ್ಟೇ. ಹೀಗಾಗಿ ಅವುಗಳ ಕುರಿತು ಹೇಳುವುದು ಏನೂ ಸೃಷ್ಟಿಯಾಗಿಲ್ಲ ಎಂದಿದ್ದಾಳೆ. ತನ್ನ ಮೊದಲ ಸಿನಿಮಾಕ್ಕೆ ಸಮ್ಮಿಶ್ರ ಪ್ರತಿಕ್ರಿಯೆ ಬಂದಿರುವುದಾಗಿ ಆಕೆ ಹೇಳಿಕೊಂಡಿದ್ದಾಳೆ. ಸಿನಿಮಾ ತುಸು ತಡವಾಗಿ ಬಿಡುಗಡೆಯಾಗಿದ್ದರೆ ಹೆಚ್ಚು ಲಾಭವಾಗುತ್ತಿತ್ತು ಎನ್ನುವುದು ಆಕೆಯ ಅಭಿಪ್ರಾಯ. ಚುಂಬನದ ದೃಶ್ಯಗಳಲ್ಲಿ ಎಗ್ಗಿಲ್ಲದೆ ಕಾಣಿಸಿಕೊಂಡಿದ್ದ ವಾಣಿ, ಹೊಸ ಬಗೆಯ ಪಾತ್ರಗಳ ಅನ್ವೇಷಣೆಯಲ್ಲಿ ಇರುವುದಾಗಿ ಹೇಳಿಕೊಂಡಿದ್ದಾಳೆ.

